ಸರಬರಾಜು ಮಾಡಲು ವ್ಯವಸ್ಥೆಗೊಳಿಸಲಾಗುತ್ತಿದೆ.

ಇ) ಸರ್ಕಾರ ಕುಂಬಾರಿಕೆ ವಸ್ತುಗಳ ಮಾರಾಟಕ್ಕಾಗಿ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಮಾರಾಟ ಸಂಘ(ಡಿಎಸ್‌ಎಂಎಸ್)ಗಳ ಮುಖಾಂತರ ಮಾರಾಟ ವ್ಯವಸ್ಥೆ ಕಲ್ಪಿಸಿದೆ.

ಈ) ಖಾನಾಪುರ ಹಾಗೂ ರಾಮನಗರಗಳಲ್ಲಿ ತರಬೇತಿ ಕೇಂದ್ರಗಳಿದ್ದು, ಕೌಶಲ್ಯ ಅಭಿವೃದ್ಧಿಯ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಎಲ್ಲಾ ಕಸುಬುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಮನ್ ಫೆಸಿಲಿಟೀಸ್‌ಗಳನ್ನು ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಒದಗಿಸಲು ಸಂಘ: ಸಂಸ್ಥೆಗಳ ಮುಖಾಂತರ ಕ್ರಮ ವಹಿಸಲಾಗುತ್ತಿದೆ.

ಉ) ಕುಂಬಾರಿಕೆ ಕಲೆ ಜೀವಂತವಾಗಿಡಲು ಅನುಕೂಲವಾಗುವಂತೆ ಸರ್ಕಾರವು ಈ ಕೆಳಕಂಡ ನಿಗಮ: ಮಂಡಳಿಗಳಿಂದ ಧನ ಸಹಾಯ ಸೌಲಭ್ಯಗಳನ್ನು ನೀಡುತ್ತಿದೆ.

(1) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ.

(2) ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

(3) ರಾಜ್ಯ ಹಣಕಾಸು ಸಂಸ್ಥೆ, ಮತ್ತು

(4) ಕರ್ನಾಟಕ ಕರಕುಶಲ ಅಭಿವೃದ್ಧಿನಿಗಮ (ನಿ)

ಇವುಗಳಿಂದ ಧನಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಪರಿಶಿಷ್ಟಜಾತಿ : ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ವಸತಿಗೃಹಗಳು.

249(559)

ಶ್ರೀ ಬನ್ನಿಕೋಡ್ ಬಿ.ಹೆಚ್(ಹಿರೇಕೆರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಶಿಷ್ಟಜಾತಿ : ಪರಿಶಿಷ್ಟಜನಾಂಗದ ವಸತಿ ನಿಲಯಗಳು ಎಷ್ಟು;

ಆ) ರಾಜ್ಯದಲ್ಲಿ ಈ ಎಲ್ಲಾ ವಸತಿ ನಿಲಯಗಳಿಂದ ಎಷ್ಟು ವಿದ್ಯಾರ್ಥಿಗಳಿಗೆ ಈ

ಸಾಲಿನಲ್ಲಿ ಪ್ರವೇಶ ಕೊಡಲಾಗಿದೆ;

ಇ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಜನಾಂಗದ ವಸತಿ ನಿಲಯ ಕಟ್ಟಡಗಳನ್ನು ಮಂಜೂರು ಮಾಡಿ ಕಟ್ಟಡದ ಕಾಮಗಾರಿ ಪ್ರಾರಂಭಿಸಲಾಗಿದ್ದು; ಅವುಗಳ ಅಂದಾಜು ಮೊತ್ತ ಮತ್ತು ಈವರೆಗೆ ಆದ ವೆಚ್ಚ ಹಾಗೂ ಕಟ್ಟಡ ಪೂರ್ಣಗೊಳಿಸಲು ಬೇಕಾಗುವ ಅವಧಿಯ ವಿವರಗಳನ್ನು ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ 1439 ವಸತಿ ನಿಲಯಗಳಿವೆ.

ಆ) ಒಟ್ಟು 83,553 ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲಾಗಿದೆ.

ಇ) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿ ಮಂಜೂರಾದ 3 ವಿದ್ಯಾರ್ಥಿನಿಲಯಗಳ ಕಟ್ಟಡಗಳ ವಿವರ ಇಂತಿದೆ.

(ರೂ. ಲಕ್ಷಗಳಲ್ಲಿ)

ವಿದ್ಯಾರ್ಥಿನಿಲಯಗಳ ಹೆಸರು	ಅಂದಾಜು ವೆಚ್ಚ	ಬಿಡುಗಡೆಯಾದ ಹಣ	ಈವರೆಗಿನ ವೆಚ್ಚ	ಪ್ರಗತಿ
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಚಿನ್ನಮಳಗುಂದ	12.85	12.85	12.06	ಮುಕ್ತಾಯ ಹಂತ.
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಯತ್ತಿನಹಳ್ಳಿ	12.85	12.85	11.58	ಮುಕ್ತಾಯ ಹಂತ.
ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಂಸಬಾವಿ.	12.85	12.85	6.06	ಲಿಂಟಲ್ ಮಟ್ಟದಲ್ಲಿದೆ.

ಪ್ರತಿ ಕಟ್ಟಡ ಪೂರ್ಣಗೊಳಿಸಲು 2 ವರ್ಷಗಳ ಕಾಲಾವಕಾಶ ಬೇಕಿದ್ದು, ಈ ಕಟ್ಟಡಗಳ ಕಾಮಗಾರಿ ಕಾರ್ಯವನ್ನು ತೀವ್ರಗೊಳಿಸಿ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಪಡೆಯಲು ಸೂಚನೆ ನೀಡಲಾಗಿದೆ.

ನಾಗಮಂಗಲ ಟೌನ್ ಪಂಚಾಯತಿಯ ವಾಣಿಜ್ಯ ಕಟ್ಟಡ ಶಿಥಿಲ.

250(508)

ಶ್ರೀ ಎಸ್. ಚಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನಾಗಮಂಗಲ ಟೌನ್ ಪಂಚಾಯತಿಯ ಹಳೇ ವಾಣಿಜ್ಯ ಕಟ್ಟಡಗಳು ತುಂಬಾ ಶಿಥಿಲವಾಗಿದೆ ಹಾಗೂ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆ ಹದಗೆಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

2) ಬೆಳ್ಳೂರು ಗ್ರಾಮ ಪಂಚಾಯಿತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದೊಂದು ವ್ಯಾಪಾರಿ ಕೇಂದ್ರವಾಗಿದ್ದು ಜನಸಂಖ್ಯೆ ಸುಮಾರು 15,000ಕ್ಕೂ ಮೇಲ್ಪಟ್ಟಿದ್ದು ಈ ಗ್ರಾಮಪಂಚಾಯಿತಿಯನ್ನು ಟೌನ್ ಪಂಚಾಯಿತಿಗೆ ಪರಿವರ್ತನೆ ಮಾಡಬೇಕೆಂಬ ಮನವಿ ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಟೌನ್ ಪಂಚಾಯಿತಿಯನ್ನಾಗಿ ಯಾವಾಗ ಪರಿವರ್ತನೆ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಮಂತ್ರಿಗಳು):

1) ಈ ಬಗ್ಗೆ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶಕರವರಿಂದ ಬರುವುದು ಬಾಕಿ ಇರುತ್ತದೆ.

2) ಪ್ರಸ್ತಾವನೆ ಬಂದಿಲ್ಲ. ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಜನಗಣತಿ ನಿರ್ದೇಶನಾಲಯದ ನಿರ್ಬಂಧ ತೆರವಾದ ನಂತರ (31-3-2001ರ ನಂತರ)ಪರಿಶೀಲಿಸಲಾಗುವುದು.

ಹುಲಿಕೆರೆ ಗ್ರಾಮಾಂತರ ಪ್ರೌಢಶಾಲೆಗಳಿಗೆ ವಿದ್ಯಾರ್ಥಿನಿಲಯ.

251(509)